

## ಗಂಡಹೆಂಡಿರ ನಡುವೆ ಮೂರನೆಯವರು ಪ್ರವೇಶಿಸಿದರೆ ಏನಾಗುತ್ತದೆ?

ಡಾ.ವಿನೋದ ಛೆಬ್ಬಿ

# 17: ತ್ರಿಕೋನೀಕರಣ

ಇಷ್ಟು ದಿನ ಗಂಡ ಹೆಂಡಿರ ಜಗಳವನ್ನು ಇಬ್ಬರ ನಡುವೆ ನಡೆಯುವ ಜಗಳ ಮಾತ್ರ ಎನ್ನುವ ರೀತಿಯಲ್ಲಿ ಅರ್ಥಮಾಡಿಕೊಂಡೆವು. ಆದರೆ ಸಮಾಜ ಜೀವಿ ಎಂದಮೇಲೆ ಇಬ್ಬರ ನಡುವೆ ಮೂರನೆಯವರ ಪ್ರವೇಶ ಆಗದೇ ಇದ್ದೀತೆ? ಆಗ ಏನಾಗಬಹುದು ಎನ್ನುವುದನ್ನು ಒಂದು ದೃಷ್ಟಾಂತದ ಮೂಲಕ ನೋಡೋಣವಂತೆ.

ಹೊಸದಾಗಿ ಮದುವೆಯಾದ ದಂಪತಿ ತಮ್ಮ ಮೂಲ ಕುಟುಂಬವನ್ನು ಬಿಟ್ಟು ಇನ್ನೊಂದು ಊರಿನಲ್ಲಿ ಇಬ್ಬರೇ ಆರಾಮವಾಗಿದ್ದಾರೆ. ಗಂಡನ ತಾಯಿ – ಅಂದರೆ ಹೆಂಡತಿಯ ಅತ್ತೆ– ಮಗನ ಸಂಸಾರ ನೋಡಲೆಂದು ಭೇಟಿ ನೀಡುತ್ತಾರೆ. ಅಲ್ಲಿ ಸೊಸೆ ಅಡಿಗೆ ಮಾಡುವಾಗ ತೆಂಗಿನಕಾಯಿ ಬಳಸದಿರುವುದನ್ನು ಕಂಡು, ಅಡಿಗೆಗೆ ತೆಂಗು ಬಳಸಿದರೇನೇ ರುಚಿ, ಅದು ತನ್ನ ಮಗನಿಗೆ ಇಷ್ಟವೂ ಹೌದು ಎಂದು (ಸ್ವಲ್ಪ ಅಸಮಾಧಾನದಿಂದ) ಸೂಚಿಸುತ್ತಾಳೆ. ಸೊಸೆಯು ತನ್ನ ಗಂಡನ ತೂಕ ಇತ್ತೀಚೆಗೆ ಜಾಸ್ತಿಯಾಗಿದೆ, ಅದಕ್ಕಾಗಿ ತೆಂಗಿನ ಬಳಕೆಯನ್ನು ನಿಲ್ಲಿಸಲಾಗಿದೆ ಎಂದು ವಿವರಿಸುತ್ತಾಳೆ. ಅತ್ತೆಗೆ ತನ್ನ ಮಗ ತೆಂಗಿಲ್ಲದ ಊಟ ತಿನ್ನುವುದನ್ನು ನೆನೆಸಿಕೊಳ್ಳಲಾಗದೆ ಸ್ವಲ್ಪವೇ ತೆಂಗಿನ ತುರಿ ಹಾಕು, ಅವನಿಗಿಷ್ಟ ಎಂದು ಒತ್ತಾಯ ತರುತ್ತಾಳೆ. ಸೊಸೆ ಒಲ್ಲೆನ್ನದೆ ಹಾಗೆ ಮಾಡಿದಾಗ ಅದು ಗಂಡನಿಗೆ ಇಷ್ಟವಾಗದೆ ಹೆಂಡತಿಯ ಮೇಲೆ ರೇಗುತ್ತಾನೆ. ಹೆಂಡತಿ ಅಸಹಾಯಕಳಾಗುತ್ತಾಳೆ. ಅತ್ತೆಯವರ ಸೂಚನೆಯ ಮೇರೆಗೆ ಆಗಿದ್ದು ತನ್ನದಲ್ಲ ಎಂದು ಸೂಚ್ಯವಾಗಿ ಹೇಳುತ್ತಾಳೆ. ಆಗ ಅವರಿಬ್ಬರ ನಡುವಿನ ಸಂಭಾಷಣೆ ಕೇಳಿ:

ಗಂಡ: ತೆಂಗಿನಕಾಯಿ ಬೇಡವೆಂದು ನಾನೇ ಹೇಳಿದ್ದೇನೆ ಎಂದು ಅಮ್ಮನಿಗೆ ಇನ್ನೊಂದುಸಲ ಹೇಳು, ಕೇಳುತ್ತಾಳೆ.

ಹೆಂಡತಿ: ಅದೇ ಮಾತು ಅತ್ತೆಯವರಿಗೆ ಹೇಳಿದೆ. ಕೇಳಲಿಲ್ಲ. ನೀವೇ ಹೇಳಿ.

ಗಂ: ಇಷ್ಟು ಚಿಕ್ಕ ಮಾತು ನಾನೇ ಹೇಳಬೇಕೆ? ನೀನೇ ಹೇಳು.

ಹೆಂ: ನಾನು ಹೇಳಿದರೆ ಕೇಳುವುದಿಲ್ಲ. ಅವರು ನಿಮ್ಮಮ್ಮ ಅಲ್ಲವೆ? ನೀವೇ ಹೇಳಿ!

ಗಂ: ನನ್ನಮ್ಮ ನಿನಗೇನಾಗಬೇಕು?

ಮಾತು ಎಲ್ಲಿಂದ ಎಲ್ಲೋ ಹೋಗಿ ಕೊನೆಗೆ ನಿಂತೇ ಹೋಗುತ್ತದೆ.

ಇದೇ ಕುಟುಂಬದ ಇನ್ನೊಂದು ದೃಷ್ಟಾಂತ ತೆಗೆದುಕೊಳ್ಳಿ. ಅಮ್ಮ ದಿನಾಲೂ ರಾತ್ರಿ ಹನ್ನೊಂದರ ತನಕ ಟೀವಿ ನೋಡುತ್ತ ಇರುತ್ತಾಳೆ. ಆಗ ಮಗ ಅವಳೊಡನೆ ಹಜಾರದಲ್ಲಿ ಕುಳಿತು ಚಿಕ್ಕಪುಟ್ಟ ಮಾತಾಡುತ್ತ ಇರುತ್ತಾನೆ. ಮಲಗುವ ಸಮಯವಾದರೂ ಅನಿವಾರ್ಯವಾಗಿ ಹೆಂಡತಿಯೂ ಅಲ್ಲೇ ಕುಳಿತುಕೊಂಡು ಮನಸ್ಸಿಲ್ಲದ ಮನಸ್ಸಿನಿಂದ ಟೀವಿ ನೋಡುತ್ತಿರುತ್ತಾಳೆ. ಕೊನೆಗೆ ಮಲಗುವ ಕೋಣೆಗೆ ಹೋದಾಗ ಗಂಡ ಹೆಂಡತಿಯನ್ನು ತಬ್ಬಿಕೊಳ್ಳಲು ಹೋದರೆ ಹೆಂಡತಿ ಮುಖ ತಿರುಗಿಸಿಕೊಂಡು ಮಲಗಿಕೊಳ್ಳುತ್ತಾಳೆ. ಗಂಡ ನಿರುಪಾಯನಾಗಿ ಇನ್ನೊಂದು ಕಡೆ ಮುಖ ಮಾಡಿ ಮಲಗುತ್ತಾನೆ.


ಆಗ ಹೆಂಡತಿ ಏನು ಯೋಚಿಸುತ್ತಾಳೆ? ಮುಂಚೆ ನಾವಿಬ್ಬರೂ ಎಷ್ಟು ಚೆನ್ನಾಗಿದ್ದೆವು! ಈ ಅತ್ತೆ ಬಂದು ನಮ್ಮಿಬ್ಬರ ಸುಮಧುರ ಸಂಬಂಧ ಹಾಳಾಯಿತು! ಇನ್ನು, ಗಂಡನ ಯೋಚನೆ? ತನ್ನ ತಾಯಿಯನ್ನು ತಾನು ಇಷ್ಟಪಡುವಷ್ಟು ತನ್ನ ಹೆಂಡತಿ ಇಷ್ಟಪಡುವುದಿಲ್ಲ! ಇನ್ನು ಮುಂದೆ ಅವರ ನಡುವೆ ಅತ್ತೆ/ತಾಯಿಯ ಮಾತು ಬಂದಾಗಲೆಲ್ಲ ಗಂಡ ಹೆಂಡತಿ ಇಬ್ಬರೂ ತಮ್ಮ ತಮ್ಮ ಧೋರಣೆಯನ್ನು ಮುಂದಿಟ್ಟುಕೊಂಡೇ ಮಾತಾಡುತ್ತಾರೆ. ಪತಿ ಪತ್ನಿಯರು ಕಷ್ಟಪಟ್ಟು ಪ್ರಯತ್ನಿಸಿ ಕಟ್ಟಿಕೊಂಡಿದ್ದ – ಅಥವಾ ಕಟ್ಟಿಕೊಳ್ಳಬೇಕೆಂದು ಬಯಸಿರುವ– ಭಾವನಾತ್ಮಕ ಸೇತುವೆ ಅಲ್ಲಾಡಲು ಶುರುವಾಗುತ್ತದೆ!

### ಏಕೆ ಹೀಗಾಗುತ್ತದೆ?

ಮರ್ರೇ ಬೋವೆನ್ ಎಂಬ ಕುಟುಂಬ ಚಿಕಿತ್ಸಕ ಬಹಳ ಕುತೂಹಲವಾದ ಸಿದ್ಧಾಂತವನ್ನು ಮುಂದಿಟ್ಟಿದ್ದಾನೆ. ಅದು ಹೀಗೆ: ಯಾವುದೇ ದಂಪತಿಯ ನಡುವಿನ ಭಾವನಾತ್ಮಕ ಸಂಬಂಧವು – ಇದಕ್ಕೆ ಭಾವಬಂಧ ಎಂದು ಕರೆಯೋಣ – ಇಬ್ಬರ ನಡುವಿನ ಸಂಬಂಧ ಮಾತ್ರವಾಗಿ ಬಹಳ ಕಾಲ ಉಳಿಯಲಾರದು. ಮೂರನೆಯವರ ಮಧ್ಯಪ್ರವೇಶವು ದಂಪತಿಯ ಭಾವಬಂಧದ ಮೇಲೆ ಪ್ರಭಾವ ಬೀರಿಯೇ ಬೀರುತ್ತದೆ. ಅವರ ಆರಾಮದಾಯಕ ಸಮತೋಲನವನ್ನು ಅಲ್ಲಾಡಿಸುತ್ತದೆ. ಇದು ಹೇಗೆಂದರೆ, ಮೂರನೆಯವರು (ಇಲ್ಲಿ ಅತ್ತೆ) ಯಾವುದೋ ರೀತಿಯಲ್ಲಿ ಇಬ್ಬರ ಪೈಕಿ ಒಬ್ಬರಿಗೆ (ಹೆಂಡತಿಗೆ) ಹತ್ತಿರವಾಗುವ ಅಥವಾ/ಮತ್ತು ಅವರನ್ನು ತಿರಸ್ಕರಿಸುವ ಭಾವ ತೋರಿಸುತ್ತ ಅವರ ಮೇಲೆ ಪ್ರಭಾವ ಬೀರುತ್ತಾರಷ್ಟೆ? ಆಗ, ಪ್ರಭಾವಕ್ಕೊಳಗಾದವರಿಗೆ (ಇಲ್ಲಿ ಹೆಂಡತಿ) ತನ್ನ ಸಂಗಾತಿಯಿಂದ (ಇಲ್ಲಿ ಗಂಡನಿಂದ) ದೂರವಾಗುವ ಹಾಗೆ ಅನ್ನಿಸಿ, ಅದು ಅವರ ಭಾವಬಂಧವನ್ನು ದುರ್ಬಲಗೊಳಿಸುತ್ತದೆ. ಈ ಪರಿಣಾಮವನ್ನು ಸರಿದೂಗಿಸಲು ಅಥವಾ ಹತ್ತಿಕ್ಕಲು ಹಲವು ಪ್ರಕ್ರಿಯೆಗಳು ನಡೆಯುತ್ತವೆ. ಇಬ್ಬರ ಪೈಕಿ ಒಬ್ಬರು (ಗಂಡ) ಮೂರನೆಯ ವ್ಯಕ್ತಿಗೆ (ತಾಯಿಗೆ) ಹತ್ತಿರವಾಗುತ್ತಾರೆ, ಹಾಗೂ ಇನ್ನೊಬ್ಬರು (ಹೆಂಡತಿ) ಆ ವ್ಯಕ್ತಿಯಿಂದ ದೂರ ಸರಿಯಲು ಹೆಣಗಿ ತನ್ನ ಹಾಗೂ ಮೂರನೆಯ ವ್ಯಕ್ತಿಯ (ತಾಯಿ) ಭಾವಬಂಧವನ್ನು ಉಳಿಸಿಕೊಳ್ಳಲು ಹೆಣಗುತ್ತಾರೆ.

ಇದನ್ನು ಸರಳೀಕರಿಸೋಣ.

- ಗಂಡಹೆಂಡತಿಯ ನಡುವೆ ಮೊದಲ ಭಾವಬಂಧವಿದೆ.
- ಗಂಡ ಹಾಗೂ ತಾಯಿಯ ನಡುವೆ ಎರಡನೆಯ ಭಾವಬಂಧವಿದೆ.
- ಅತ್ತೆಸೊಸೆಯ ನಡುವೆ – ವಿರಸದಿಂದ ಕೂಡಿದ್ದರೂ – ಮೂರನೆಯ ಭಾವಬಂಧವಿದೆ.
- ಎರಡನೆಯ ಭಾವಬಂಧವು ಒಂದನೆಯ ಭಾವಬಂಧವನ್ನು ದುರ್ಬಲಗೊಳಿಸುತ್ತಿದೆ.
- ಅದನ್ನು ತಡೆಯಲು ಹೆಂಡತಿ ಎರಡನೆಯ ಭಾವಬಂಧವನ್ನು ದುರ್ಬಲಗೊಳಿಸಲು ನೋಡುತ್ತಾಳೆ (ನಿಮ್ಮಮ್ಮನಿಗೆ ನೀವೇ ಹೇಳಿ).
- ಗಂಡನು ಹೆಂಡತಿಯ ಯತ್ನವನ್ನು ವಿಫಲಗೊಳಿಸುತ್ತ (ನನಗೆ ಸಮಯವಿಲ್ಲ) ಎರಡನೆಯ ಭಾವಬಂಧವನ್ನು ಎತ್ತಿಹಿಡಿಯುತ್ತಾನೆ (ನಮ್ಮಮ್ಮ ನಿನಗೇನಾಗಬೇಕು?). ತನ್ಮೂಲಕ ಮೂರನೆಯ ಭಾವಬಂಧಕ್ಕೆ ಕುಮ್ಮಕ್ಕು ಕೊಡುತ್ತಾನೆ (ಅಮ್ಮನಿಗೆ ನೀನೇ ಹೇಳು).




- ತನ್ನ ಯತ್ನ ವಿಫಲವಾದುದನ್ನು ಕಂಡಾಗ ಅದರ ಮೇಲೆ ಬೆಳಕು ಚೆಲ್ಲಲು ಹೆಂಡತಿ ಒಂದನೆಯ ಭಾವಬಂಧಕ್ಕೆ (ದೂರ ಮಲಗಿ) ಕತ್ತರಿ ಹಾಕುತ್ತಾಳೆ.
- ಆಗ ಗಂಡ ಮೊದಲ (ಆಕೆಯನ್ನು ತಬ್ಬಿಕೊಂಡು) ಭಾವಬಂಧವನ್ನು ಬಲಗೊಳಿಸಲು ಯತ್ನಿಸುತ್ತಾನೆ.

ಇಲ್ಲಿ ಮೂರನೆಯವರ ಪ್ರವೇಶದಿಂದ ಒಂದು ಭಾವಬಂಧ ಹೋಗಿ ಮೂರು ಭಾವಬಂಧಗಳಾಗುವುದರಿಂದ ಇದಕ್ಕೆ ತ್ರಿಕೋನೀಕರಣ ಎಂದು ಹೆಸರು.

### ತ್ರಿಕೋನೀಕರಣದ ಫಲಶ್ರುತಿ ಏನಾಗಬಹುದು?

ಮುಂಚಿನ ದಾಂಪತ್ಯದ ಭಾವಬಂಧವು ತ್ರಿಕೋನೀಕರಣಕ್ಕೆ ಒಳಗಾಗಲೆಲ್ಲ ಬುಡಸಹಿತ ಅಲ್ಲಾಡುತ್ತದೆ. ಆಗ ಆಗುವ ಪರಿಣಾಮವು ಸಂಬಂಧಪಟ್ಟ ಸಂಗಾತಿಗಳು ಅದನ್ನು ಹೇಗೆ ನಿರ್ವಹಿಸುತ್ತಾರೆ ಎಂಬುದನ್ನು ಅವಲಂಬಿಸಿದೆ. ಎಲ್ಲ ದಾಂಪತ್ಯಗಳು ಕಾಲಕಾಲಕ್ಕೆ ಅನಿವಾರ್ಯವಾಗಿ ತ್ರಿಕೋನೀಕರಣಕ್ಕೆ ಒಳಗಾಗುವುದರಿಂದ ದಾಂಪತ್ಯದ ಭಾವಬಂಧಗಳು ಮುಂಚಿನಂತಿರದೆ ಕಾಲಕಾಲಕ್ಕೆ ಬದಲಾಗುತ್ತ ಇರುತ್ತವೆ. ವಿಶೇಷವೇನೆಂದರೆ, ಪ್ರತಿಸಲದ ತ್ರಿಕೋನೀರಣದ ನಂತರ ಉಂಟಾಗುವ ಹೊಸ ಸಮತೋಲನದ ಸ್ಥಿತಿಯು ಮುಂಚೆಗಿಂತ ಭಿನ್ನವಾಗಿರುವುದರಿಂದ ಇದು ಇಬ್ಬರಿಗೂ ಹಿಡಿಸುವಂಥದ್ದು ಆಗಿರಬೇಕೆಂದಿಲ್ಲ. ಆದರೂ ದಾಂಪತ್ಯವು ನಡೆಯುತ್ತದೆ!

ತ್ರಿಕೋನೀಕರಣದ ಬಗೆಗೆ ಇನ್ನಷ್ಟು ವಿವರಗಳನ್ನು ಮುಂದಿನ ಸಲ ತಿಳಿಯೋಣ.

ದಾಂಪತ್ಯಕ್ಕೆ ಹೆಚ್ಚಿನ ನೆಮ್ಮದಿಯನ್ನು ತಂದುಕೊಳ್ಳಲು ಜನಸಾಮಾನ್ಯರಿಗಾಗಿ 'ಸಮೃದ್ಧ ದಾಂಪತ್ಯ'ದ ಬಗೆಗೆ ಕಾರ್ಯಾಗಾರಗಳನ್ನು ಇಂಗ್ಲಿಷ್ ಹಾಗೂ ಕನ್ನಡದಲ್ಲಿ ಪ್ರತ್ಯೇಕವಾಗಿ ಏರ್ಪಡಿಸಲು ಯೋಜಿಸುತ್ತಿದ್ದೇನೆ. ಆಸಕ್ತರು ಸಂಪರ್ಕಿಸಬೇಕಾದ ದೂರವಾಣಿ: 8494922888.)

ದಾಂಪತ್ಯದ ಬಗೆಗೆ ನಿಮ್ಮ ಅನಿಸಿಕೆ, ಸಮಸ್ಯೆಗಳನ್ನು ಸುಖೀ ದಾಂಪತ್ಯ ವಿಭಾಗ, ನಂ. 75, ಎಂ. ಜಿ. ರಸ್ತೆ, ಬೆಂಗಳೂರು 01 ಇಲ್ಲಿಗೆ ಕಳುಹಿಸಿ. ದಾಂಪತ್ಯ ಸಮಸ್ಯೆಗಳಿಗೆ ಉಚಿತ ಸಹಾಯವಾಣಿ 8494944888 ಗೆ ಪ್ರತಿ ಶುಕ್ರವಾರ ಮಧ್ಯಾಹ್ನ 2ರಿಂದ 4ರ ತನಕ ಕರೆಮಾಡಿ. ಲೇಖಕರ ವಿಳಾಸ: .www.medisex.org